# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

# कर्नाटक-संस्कृत-विश्वविद्यालय:

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪರೀಕ್ಷಾಂಗ/ರಾ.ವೇ.ನೇ.ಪ/2025–26 ದಿನಾಂಕ: 25.08.2025

## ಸೂಚನಾಪತ್ರ

**ವಿಷಯ: ರಾಜ್ಯ ವೇತನಶ್ರೇಣಿಯ ಯೋಜನಾ ಸಹಾಯಕ (ಶೈಕ್ಷಣಿಕ) (ಹೈ–ಕ) ಹುದ್ದೆಯ ನೇಮಕಾತಿ ಲಿಖಿತ ಪರೀಕ್ಷೆಯನ್ನು ನಡೆಸುವ ಬಗೆಗೆ.**

ಉಲ್ಲೇಖ:
1. ನೇಮಕಾತಿ ಅಧಿಸೂಚನೆ ಸಂಖ್ಯೆ: ಕಸಂವಿ/ಬ್ಯಾ.ಹು.02/2022; ದಿನಾಂಕ: 12.09.2024.
2. ಅರ್ಜಿ ಪರಿಶೀಲನಾ ಸಮಿತಿ ವರದಿ; ಸಂಖ್ಯೆ: ಕಸಂವಿ/ಬ್ಯಾ.ಹು.02/2022–23; ದಿನಾಂಕ: 06.06.2025.
3. ಮಾನ್ಯ ಕುಲಪತಿಗಳ ಆದೇಶ; ಕಂಡಿಕೆ ಸಂಖ್ಯೆ: 08; ದಿನಾಂಕ: 20.08.2025.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಖಾಲಿಯಿರುವ ಹೈದರಾಬಾದ್–ಕರ್ನಾಟಕಕ್ಕೆ ಮೀಸಲಾದ ರಾಜ್ಯ ವೇತನಶ್ರೇಣಿಯ ಬ್ಯಾಕ್‌ಲಾಗ್ 'ಯೋಜನಾ ಸಹಾಯಕ (ಶೈಕ್ಷಣಿಕ)' ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಉಲ್ಲೇಖ (01)ರಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಅದರಂತೆ, ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ, ಉಲ್ಲೇಖ (02)ರಲ್ಲಿ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖ (03)ರ ಮಾನ್ಯ ಕುಲಪತಿಗಳ ಆದೇಶದಂತೆ, ಅರ್ಹ ಅಭ್ಯರ್ಥಿಗಳಿಗೆ ಈ ಕೆಳಕಂಡ ದಿನಾಂಕ ಮತ್ತು ಸಮಯಕ್ಕೆ ಲಿಖಿತ ಪರೀಕ್ಷೆಯನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಕೆಳಕಂಡ ಸೂಚನೆಗಳನುಸಾರ ಲಿಖಿತ ಪರೀಕ್ಷೆಗೆ ಹಾಜರಾಗಲು ಈ ಮೂಲಕ ಸೂಚಿಸಿದೆ.

| ಲಿಖಿತ ಪರೀಕ್ಷೆ ನಡೆಯುವ ದಿನಾಂಕ | ಸಮಯ | | ಸ್ಥಳ |
|---|---|---|---|
| **06.09.2025, ಶನಿವಾರ** | **ಪತ್ರಿಕೆ–1: ಸಾಮಾನ್ಯಜ್ಞಾನ** | **ಬೆಳಿಗ್ಗೆ 10.00 ರಿಂದ 11.00 ಗಂಟೆ ವರೆಗೆ** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018** |
| | **ಪತ್ರಿಕೆ–2: ವಿಷಯಜ್ಞಾನ** | **ಬೆಳಿಗ್ಗೆ 11.00 ರಿಂದ 12.00 ಗಂಟೆ ವರೆಗೆ** | |

**ಸೂಚನೆಗಳು:**

1) ಪರೀಕ್ಷೆಯನ್ನು ಬರೆಯುವ ಅಭ್ಯರ್ಥಿಗಳು ನಿಗದಿತ ಸಮಯಕ್ಕಿಂತ ಅರ್ಧ ಗಂಟೆ ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರುವುದು. ನಿಗದಿತ ಸಮಯಕ್ಕಿಂತ ತಡವಾಗಿ ಆಗಮಿಸುವ ಅಭ್ಯರ್ಥಿಗಳಿಗೆ ಪರೀಕ್ಷೆಯನ್ನು ಬರೆಯಲು ಅವಕಾಶವಿರುವುದಿಲ್ಲ.
2) ಗುರುತಿನ ಪುರಾವೆಯಾಗಿ ಕೇಂದ್ರ/ರಾಜ್ಯ ಸರ್ಕಾರವು ನೀಡಿದ ಯಾವುದಾದರೂ ಒಂದು ಮೂಲ (Original Copy) ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹೊಂದಿರುವುದು.
3) ಲಿಖಿತ ಪರೀಕ್ಷೆಯ ಪ್ರವೇಶಪತ್ರವನ್ನು ಕಡ್ಡಾಯವಾಗಿ ತಂದಿರುವುದು.

4) ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುವುದಿಲ್ಲ.

**ಕುಲಸಚಿವರು (ಮೌಲ್ಯಮಾಪನ)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಬೆಂಗಳೂರು

Registrar (Evaluation)
Karnataka Samskrita Vishwavidyalaya
Bengaluru - 560 018.